## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 615/2015 ಸಿಡಬ್ಲೂ: 1 ಪಿಡಬ್ಲೂ: 6

ಪ್ರಮಾಣವಚನ ಬೋಧಿಸಲಾಯಿತು ದಿಃ 10-12-2025

ಹೆಸರು : ಮುಸ್ತಫಾ

ತಂದೆ ಹೆಸರು : ಜಮಿರುದ್ದೀನ್ ಶೇಖ್

ವಯಸ್ಸು : 38 ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸಸ್ಥಳ : ಮುಂಬೈ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ದಿ.24-12-2013 ರಂದು ಆರೋಪಿತನ ಅಂಗಡಿಯಲ್ಲಿ (ಅಂಗಡಿಯ ಹೆಸರು ಗೊತ್ತಿಲ್ಲ) ನಕಲಿ ಜಂಡೂಬಾಂಬ್ ಬಾಟಲಿಗಳು ಇದ್ದವು. ಆಗ ನಾವು ನಕಲಿ ಜಂಡೂಬಾಂಬಿ ಡಬ್ಬಿಗಳನ್ನು ಹಿಡಿಯಲು ಹೋದಾಗ ಅಲ್ಲಿ ನಕಲಿ 390 ಜಂಡೂಬಾಂಬ್ ಡಬ್ಬಿಗಳು ಸಿಕ್ಕಿತ್ತು. ಆಗ ನಾವು ಪೋಲೀಸರಿಗೆ ಪ್ರಕರಣ ದಾಖಲಿಸಲು ದೂರನ್ನು ಸಲ್ಲಿಸಿದೆವು. ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಂತರ ಪ್ರ ವ ವರದಿಯ ಪ್ರತಿಯನ್ನು ಪಡೆದುಕೊಂಡು ನಮ್ಮ ಕಂಪನಿಗೆ ಜಮಾ ಮಾಡಿರುತ್ತೇನೆ. ನಾನು ಘಟನಾ ನಡೆದ ಸಮಯದಲ್ಲಿ ಜಂಡೂಬಾಂಬ್ ಕಂಪನಿಯಲ್ಲಿ ತನಿಖಾಧಿಕಾರಿಯಾಗಿ ಸೇವೆಯನ್ನು ಸಲ್ಲಿಸುತ್ತಿದ್ದು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ:

ನಾನು 10 ತರಗತಿಯ ವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ಸಾಮಾನ್ಯವಾಗಿ ಎರಡು ಜಂಡೂಬಾಂಬ್ ಡಬ್ಬಿಗಳನ್ನು ನೋಡಿದಾಗ ಯಾವುದು ಅಸಲಿ ಮತ್ತು ಯಾವುದು ನಕಲಿ ಎಂದು ಹೇಳಲು ನಮಗೆ ತರಗತಿಯನ್ನು ನೀಡಿರುವುದರಿಂದ ಹೇಳಲು ಬರುತ್ತದೆ. ನನಗೆ ತರಬೇತಿಯ ಪ್ರಮಾಣ

ಪತ್ರವನ್ನು ನೀಡಿಲ್ಲ. ಯಾವಾ ಆಧಾರದ ಮೇಲೆ ಆರೋಪಿತನ ಅಂಗಡಿಯಲ್ಲಿ ಸಿಕ್ಕಿರುವ ಜಂಡೂಬಾಂಬ್ ಡಬ್ಬಿಗಳು ನಕಲಿ ಎಂದು ಹೇಳುತ್ತಿದ್ದೀರಿ ಅಂತಾ ಕೇಳಿದಾಗ ಸಾಕ್ಷಿಯು ನಾವು ಮೊದಲು ಪರಿಶೀಲನೆ ಮಾಡಿ ಹೇಳಿದೆವು ಎಂದು ನುಡಿಯುತ್ತಾರೆ. ಅಸಲಿ ಜಂಡೂಬಾಂಬ್ ನಲ್ಲಿ ಯಾವ ಯಾವ ಅಂಶಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ನಾವು ಯಾವುದೇ ಜಂಡೂಬಾಂಬ್ ಗಳು ನಕಲಿ ಅಂತಾ ಹೇಳಬೇಕಾದರೆ ಮೊದಲು ಅದರ ಪರೀಕ್ಷೆಯನ್ನು ಮಾಡಿದ ನಂತರ ಹೇಳಬಹುದು ಎಂದರೆ ಸಾಕ್ಷಿಯು ಅದು ಕಂಪನಿಯವರು ನೋಡುತ್ತಾರೆ ಎಂದು ನುಡಿಯುತ್ತಾರೆ. ನನ್ನ ಜೊತೆಯಲ್ಲಿ ನಮ್ಮ ಕಂಪನಿಯವರು ಇರಲಿಲ್ಲ ಎಂದರೆ ಸರಿಯಿಲ್ಲ. ಸಾಕ್ಷಿಯು ಮುಂದುವರೆದು ಇನೊಬ್ಬರು ನನ್ನ ಜೊತೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ. ನಾವು ಆರೋಪಿತನ ಅಂಗಡಿಗೆ ಹೋದಾಗ ಮಧ್ಯಾಹ್ನ 12-40 ಗಂಟೆಯಾಗಿತ್ತು. ಮೊದಲು ಆರೋಪಿತನ ಅಂಗಡಿಯಲ್ಲಿ ಪರಿಶೀಲನೆ ಮಾಡಿ ನಂತರ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿದ್ದೇನೆ. ಆ ದಿನ ಆರೋಪಿತನ ಅಂಗಡಿಯನ್ನು ಹೊರತು ಪಡಿಸಿ ಇನ್ನು ಎರಡು ಮೂರು ಅಂಗಡಿಗಳಲ್ಲಿ ತನಿಖೆಯನ್ನು ಮಾಡಿರುತ್ತೇನೆ. ಆದರೆ ಅವರ ಅಂಗಡಿಯಲ್ಲಿ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಕಂಪನಿಯವರು ನಮಗೆ ತನಿಖೆ ಮಾಡಲು Authorization letter ಕೊಡುತ್ತಾರೆ ಎಂದರೆ ಸಾಕ್ಷಿಯು ಐ ಡಿ ಕಾರ್ಡನ್ನು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಇಮಾಮಿ ಕಂಪನಿಯವರು ಕೆಲಸ ಮಾಡಲು Appointment letter ನ್ನು ಕೊಡುತ್ತಾರೆ ಎಂದರೆ ಸಾಕ್ಷಿಯು ನಾನು IPR ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇ ಈ ಕಂಪನಿ ಇಮಾಮಿ ಕಂಪನಿಯ ಕೆಳಗಡೆ ಕೆಲಸ ಮಾಡುತ್ತದೆ. IPR ಕಂಪನಿಯವರು ನನಗೆ Appointment letter ನೀಡಿದ್ದರು. ಸದರಿ ಪತ್ರವನ್ನು ಪೊಲೀಸರಿಗೆ ನೀಡಿಲ್ಲ. ಐ ಡಿ ಕಾರ್ಡನ್ನು ಮಾತ್ರ ತೋರಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ಪೊಲೀಸರಿಗೆ ಕೊಟ್ಟಿರುತ್ತೇನೊ ಅಥವಾ ಇಲ್ಲ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. IPR ಕಂಪನಿ ಖಾಲಗಿ ಕಂಪನಿಯಾಗಿದೆ. ನಾನು IPR ಕಂಪನಿಯಲ್ಲಿ ಎಂದಿಗೂ ಕೆಲಸ ಮಾಡಿಲ್ಲ ಹಾಗೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. IPR ಕಂಪನಿಯವರು ನಾನು 10 ನೇ ತರಗತಿಯವರೆಗೆ ವಿದ್ಯಾಯಭ್ಯಾಸ ಮಾಡಿರುವುದರಿಂದ ನನಗೆ ಕೆಲಸಕ್ಕಾಗಿ ಇಟ್ಟಿಕೊಂಡಿಲ್ಲ ಎಂದರೆ ಸರಿಯಿಲ್ಲ. ಸದರಿ IPR ಕಂಪನಿಯಲ್ಲಿ ಕೆಲಸ ಮಾಡಬೇಕಾದರೆ ಒಂದು ಅರ್ಹ ವ್ಯಕ್ತಿಗೆ ಮಾತ್ರ ಕೆಲಸ ಕೊಡುತ್ತಾರೆ ಎಂದರೆ ಸಾಕ್ಷಿಯು ನಮಗೆ ತರಭೇತಿ ನೀಡಿದ್ದರು ಎಂದು ನುಡಿಯುತ್ತಾರೆ. ನನಗೆ ಯಾವಾಗ ತರಬೇತಿ ನೀಡಿದರು ಎಂದು ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು ಬಹಳ ದಿನ ಆಗಿದೆ ಎಂದು ನುಡಿಯುತ್ತಾರೆ. ನಮಗೆ 1 ವಾರದಿಂದ 10 ದಿವಸಗಳು ಮಾತ್ರ ತರಬೇತಿ ನೀಡಿದರು. IPR

ಕಂಪನಿಯವರು ನನಗೆ ಯಾವುದೇತರಬೇತಿ ನೀಡಿಲ್ಲ ಎಂದರೆ ಸರಿಯಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾನು ಎಂದಿಗೂ ಆರೋಪಿತನ ಅಂಗಡಿಗೆ ಹೋಗಿಲ್ಲ ನಾನು ಯಾವುದೇ ದಾಳಿ ಮಾಡಿಲ್ಲಎಂದರೆ ಸರಿಯಿಲ್ಲ. ನನಗೆ ಆರೋಪಿತನ ಚಕ್ಕು ಬಂದಿ ಹೇಳಲು ಬರುವುದಿಲ್ಲ. ನಾನು 10 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುವುದಿರಿಂದ ನನಗೆ ಯಾವುದೆ ಅಸಲಿ ಯಾವುದು ನಕಲಿ ಎಂದು ಹೇಸಲು ಬರುವುದಿಲ್ಲ ಎಂದರೆ ಸರಿಯಿಲ್ಲ. ಕಂಪನಿಯವರು ನಮಗೆ ತನಿಖೆ ಮಾಡಲು ಯಾವುದೇ ಸಾದನಗಳು ನೀಡಿಲ್ಲ ಯಾಕೆಂದರೆ ಅದದರ ಅವಶ್ಯಕತೆ ಇರಲಿಲ್ಲ. ಪ್ರತಿಯೊಂದು ಜಂಚೂ ಬಾಂದಟ್ಟಬ್ಬಿಯ ಮೇಲೆ ಕ್ಯೂ ಆರ್ ಕೋಡ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ದೂರನ್ನು ಪೆಲೀಸ್ ಠಾಣೆಯಲ್ಲಿ ಬರೆಸಿರುತ್ತೇನೆ. ಆರೋಪಿತನ ಅಂಗಡಿಯಿಂದ ಪೊಲೀಸ್ ಠಾಣೆ ಎಷ್ಟು ದೂರ ಇರುತ್ತದೆ ನನಗೆ ಗೊತ್ತಿಲ್ಲ ಮತ್ತುಎಷ್ಟು ಟೈಮ್ ಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಕಂಪನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳುಸಾಕ್ಷಿ ನುಡಿಯುತಿತದ್ದೇನ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**